**MODEL QUESTION PAPER**
**KANNADA-PAPER I**
**ಮಾದರಿ ಪ್ರಶ್ನೆ ಪತ್ರಿಕೆ ಅಂಕಗಳು:40**

**ತರಗತಿ:IX ಕನ್ನಡ I ಸಮಯ:1 ಗಂಟೆ 30 ನಿಮಿಷ**

**ಸೂಚನೆಗಳು:**

- **ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳಲು ನಿಮಗೆ 15 ನಿಮಿಷ ಕಾಲಾವಕಾಶ ನೀಡಲಾಗಿದೆ.**
- **ಎಲ್ಲಾ ಪ್ರಶ್ನೆಗಳನ್ನು ಸಾವಧಾನವಾಗಿ ಓದಿರಿ.**
- **ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡು ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.**

**1 ರಿಂದ 3 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*1=2**

1.1. ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

' ಗ್ರಾಮಭಾರತ ' ಪಾಠ ಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ?

( ಕಥೆ, ಕಾದಂಬರಿ, ಅಂಕಣ ಬರಹ, ವಿಮರ್ಶೆ )

2. ಮಾದರಿಯಂತೆ ಉತ್ತರಿಸಿರಿ.

ದುಃಖೋದ್ರಿಕ್ತ = ದುಃಖ + ಉದ್ರಿಕ್ತ

ಔಷಧೋಪಚಾರ= -----------

3.' ನಂದನವೇ ನಾಡೆಲ್ಲವೂ' ಎಂಬಲ್ಲಿ ಕವಿ ಮಲೆನಾಡಿನ ಯಾವ ಶ್ರೇಷ್ಠತೆಯನ್ನು ಗುರುತಿಸುತ್ತಾರೆ?

(ಮಳೆ ,ಗಾಳಿ ,ಮೋಡ, ಪ್ರಕೃತಿ ಸೌಂದರ್ಯ)

**4 ರಿಂದ 7 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿರಿ. 3*2=6**

4.ಕೆಳಗೆ ಕೊಡಲಾದ ವಾಕ್ಯದಲ್ಲಿ ಅಡಿಗೆರೆ ಎಳೆದ ಭಾಷಾ ಪ್ರಯೋಗವನ್ನು ಬಳಸಿಕೊಂಡು ಇನ್ನೊಂದು ಸ್ವಂತ ವಾಕ್ಯವನ್ನು ರಚಿಸಿರಿ.

ಅಜ್ಜಿಯ ಮಾತಿನ ಅರ್ಥ ತಿಳಿಯದ ನಮ್ರತಾಳು <u>ಗರಬಡಿದವಳಂತೆ</u> ನಿಂತುಕೊಂಡಳು.

5. ' ಬೀಬಜ್ಜಿ 'ಪಾಠ ಭಾಗವು ನೀಡುವ ಸಂದೇಶವೇನು ನಿಮ್ಮ ಮಾತುಗಳಲ್ಲಿ ಬರೆಯಿರಿ.

6. ' ಬೆಟ್ಟದ ನೋಟ' ಪಾಠ ಭಾಗಕ್ಕೆ ಆ ಶೀರ್ಷಿಕೆಯು ಎಷ್ಟರಮಟ್ಟಿಗೆ ಒಪ್ಪುತ್ತದೆ ವಿಶ್ಲೇಷಿಸಿ ಬರೆಯಿರಿ.

7.ರಶೀದ್ ಈ ಶತಮಾನದಲ್ಲಿ ಬದುಕಲು ನಾಲಾಯಕ್ ಆದ ವ್ಯಕ್ತಿ ಎಂಬುದು ಆತನ ಸ್ನೇಹಿತರ ಅನಿಸಿಕೆ. ಆತನ ಅತಿ ಪ್ರಾಮಾಣಿಕತೆಯೇ ಸ್ನೇಹಿತರ ಈ ವಾದಕ್ಕೆ ಕಾರಣ. ಸಾಕಷ್ಟು ಮೇಲ್ಸಂಪಾದನೆ ಪಡೆಯಬಹುದಾಗಿದ್ದ ಉದ್ಯೋಗದಲ್ಲಿದ್ದರೂ ಆತನು ಈವರೆಗೂ ಆ ಹಾದಿ ತುಳಿದವನಲ್ಲ ತಿಂಗಳ ಕೊನೆಯಲ್ಲಿ ಹಣದ ಕೊರತೆಯಿಂದಾಗಿ ಬಸಳೆ ಸೊಪ್ಪಿನ ಸಾರು ಮಾಡಿ ಊಟ ಮಾಡಿದ್ದು ಎಷ್ಟು ಬಾರಿಯೊ! ಆತನ ಮನೆಯಲ್ಲಿ ಹೆಂಡತಿ ಮತ್ತು ಇಬ್ಬರು ಮಕ್ಕಳು , ತಾಯಿ, ನಿರುದ್ಯೋಗಿ ತಮ್ಮ ಮತ್ತು ತಂಗಿ ಇದ್ದಾರೆ. ಎಲ್ಲರೂ ಆತನೊಡನೆ ಸರಕಾರಿ ಮನೆಯಲ್ಲಿ ವಾಸಿಸುತ್ತಿದ್ದರು ಅವನ ಅತಿ ಪ್ರಾಮಾಣಿಕತೆ ಮತ್ತು ದೈವ ಭಕ್ತಿ ಉಳಿದವರಿಗೆ ಮಾದರಿಯಾಗಿತ್ತು. ಕೆಳಗೆ ನೀಡಲಾದ ಗದ್ಯ ಭಾಗದಲ್ಲಿ ಬಂದಿರುವ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ.

**8 ರಿಂದ 13 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ. 5*4=20**

8. ಬೀಬಜ್ಜಿಯ ಮನೆಯ ಹುಗ್ಗಿಯ ಸವಿಯನ್ನು ಸವಿದ ಬಾಲಕನೊಬ್ಬನು ಆ ದಿನ ತನ್ನ ದಿನಚರಿಯಲ್ಲಿ ಹೇಗೆ ಬರೆದಿರಬಹುದು ?ಊಹಿಸಿ ದಿನಚರಿ ಬರೆಯಿರಿ.

9. ಕೆಳಗೆ ನೀಡಲಾದ ಸರ್ವಜ್ಞನ ವಚನಗಳ ಆಶಯವನ್ನು ಹೋಲಿಸಿ ನಿಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

ಕೊಟ್ಟುಂಬ ಕಾಲದಲ್ಲಿ ಕೊಟ್ಟುಣ್ಣಲರಿಯದೆ
ಹುಟ್ಟಿಯ ಮೇಲೆ ಜೇನಿಕ್ಕಿ ಪರರಿಗೆ

© State Assessment Cell SCERT, Kerala

ಕೊಟ್ಟು ಹೋಹಂತೆ ಸರ್ವಜ್ಞ.

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ
ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ.

10. ಅರಣ್ಯ ನಾಶದಿಂದ ಕಾಡು ಪ್ರಾಣಿಗಳು ತಮ್ಮ ನೆಲೆಗಳನ್ನು ಕಳೆದುಕೊಂಡು ನಾಡಿನತ್ತ ಮುಖ ಮಾಡಿವೆ. ಕಾಡು ಪ್ರಾಣಿಗಳ ಉಪಟಳದ ಬಗ್ಗೆ ಜನಜಾಗ್ರತಿ ಮೂಡಿಸಲ ಅಗತ್ಯವಾದ ಕರ ಪತ್ರವನ್ನು ತಯಾರಿಸಿರಿ.

11.ಕುವೆಂಪುರವರ 'ಹೋಗುವೆನು ನಾ' ಕವನದ ಸಾಲುಗಳನ್ನು ಕೆಳಗೆ ನೀಡಲಾಗಿದೆ ಅದರ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

ರವಿಯ ರಶ್ಮಿಯ ಪ್ರಜ್ಞೆಯಿಲ್ಲದ ವಿಪಿನ ನಿರ್ಜನ ರಂಗಕೆ,
ಮುಗಿಲನಂಡಲೆಯುತ್ತ ನಿಂತಿಹ ಧೀರ ಪರ್ವತ ಶೃಂಗಕೆ,
ವನ ವಿಹಂಗಸ್ವನ ತರಂಗಿತ ಪವನ ಪಾವನ ಸಂಗಕೆ,
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ!

12. ಜೊತೆಗೊಳಿಸಿರಿ.

| ಅ. | ಆ | ಇ |
|---|---|---|
| 1 ತಿಳಿಯೆನೋವಿದೆ, ತಿಳಿಯದಿರುವುದೇ ಜಾಣ್ಮೆ. | 1. ಶಿವರಾಮ ಕಾರಂತ. | 1. ವಚನಗಳು |
| 2. ಓದಿ ಓದಿ ನಿದ್ದೆಗೆಟ್ಟು ತೆಳ್ಳಗಾಗಿದ್ದೀರ | 2. ಸರ್ವಜ್ಞ | 2. ಬೆಟ್ಟದ ಜೀವ |
| 3. ಕೊಡುವ ತಾನೆ ಮೃಢನು | 3. ಕುವೆಂಪು | 3. ಬಟ್ಟೆ ಇಲ್ಲದ ಊರಿನಲ್ಲಿ |
| 4. ನಮ್ಮ ಮನೆಯ ಹಸು ಮೇವಿಗೆಹೋದುದು ಬರಲಿಲ್ಲ. | 4. ಮಿರ್ಜಾ ಬಶೀರ್. | 4. ಪಕ್ಷಿಕಾಶಿ |

13. ನಿತ್ಯವೂ ಬೆಟ್ಟವನ್ನೇ ನೋಡುತ್ತ, ಎಲ್ಲೋ ತಿರುಗಾಡುತ್ತಿರುವ ನಮಗೆ ಇದು ಬರಿಯ ಬೆಟ್ಟ .ಏನೋ ಪೇಟೆಯಿಂದ ಬರುವ ನಿಮ್ಮಂಥವರು ಅದರ ಚಂದವನ್ನು ಬಣ್ಣಿಸಿದರೇನೆ ಅದು ಚಂದವೆಂದು ತಿಳಿಯಬೇಕು. ' 'ಬೆಟ್ಟದ ನೋಟ 'ಪಾಠದ ಈ ಮಾತಿನ ಹಿನ್ನೆಲೆಯಲ್ಲಿ ನೀವು ನೋಡಿದ ಪ್ರಕೃತಿ ರಮಣೀಯ ದೃಶ್ಯವನ್ನು ವರ್ಣಿಸಿ ಬರೆಯಿರಿ

**14 ರಿಂದ 16 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*6=12**

14. 'ಇಂದು ನಮ್ಮ ಹಳ್ಳಿಗಳನ್ನು ನಗರಕ್ಕೆ ಒಯ್ಯುವ ಅಥವಾ ಹಳ್ಳಿಗಳನ್ನೇ ನಗರಗಳನ್ನಾಗಿಸುವ ಅಡ್ಡಡ್ಡ ಸಿಗಿದು ಸಾಗುವ **ರಾಷ್ಟ್ರೀಯ** ಹೆದ್ದಾರಿಯ ವಿಡಬಲದ ನೆರಳು ಮರಗಳು ನಾಶವಾಗಿ ಅದರಡಿಯಲ್ಲಿ ಯಾವುದೇ ಅರಳಿಕಟ್ಟೆಗಳು ಉಳಿದಿಲ್ಲ'. 'ಗ್ರಾಮ ಭಾರತ' ಪಾಠ ದಲ್ಲಿ ಬರುವ ಈ ಮಾತಿನ ಆಧಾರದಲ್ಲಿ'ರಸ್ತೆ ಅಗಲೀಕರಣದ ಪರಿಣಾಮಗಳು' ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆಯಿರಿ.

15. ' ನೊಂದವರ ಗೆಳೆಯ' ಪಾಠದಲ್ಲಿ ಈಶ್ವರ ಚಂದ್ರ ವಿದ್ಯಾಸಾಗರರು ಮಾಡುತ್ತಿದ್ದ ಸಮಾಜ ಸೇವೆಯ ಬಗ್ಗೆ ಓದಿ ತಿಳಿದಿರುವಿರಿ . ಅದರ ಆಧಾರದಲ್ಲಿ 'ವಿದ್ಯಾರ್ಥಿ ಮತ್ತು ಸಮಾಜ ಸೇವೆ' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

16. ವೃದ್ಧರು ನಮಗೆ ದಾರಿದೀಪ ಒಂದು ಮನೆಯ ಏಳಿಗೆಯಲ್ಲಿ ವೃದ್ಧರ ಪಾತ್ರ ಮಹತ್ತರವಾದದ್ದು ಅಂತಹ ವೃದ್ಧರ ಆರೈಕೆಯು ನಮ್ಮ ಕರ್ತವ್ಯವಾಗಿದೆ ' ವೃದ್ಧರ ಆರೈಕೆಯಲ್ಲಿ ಯುವಜನರ ಪಾತ್ರ ' ಎಂಬ ವಿಷಯದ ಕುರಿತು ಲೇಖನವನ್ನು ಬರೆಯಿರಿ.

© State Assessment Cell SCERT, Kerala